**FDP 16-12** **PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 12.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ A G W, ವಕೀಲರಿಂದಃ**

2. ಅನ್ನಪೂರ್ಣ ಖಾಯಂ ರಹವಾಸಿ ಕುಕನೂರ ಗ್ರಾಮ ಅಂದರೆ ಸರಿ. ಅವಳು ಬಂದು -ಹೋಗಿ ಮಾಡುತ್ತಿದ್ದಳು. ಅನ್ನಪೂರ್ಣಾ ಇವಳಿಗೆ ಅಣ್ಣವ್ವ ಹಾಗೂ ಅನಸವ್ವ ಅಂತಾ ಕರೆಯುತ್ತಿದ್ದರು ಅಂದರೆ ಸರಿ. ಅನ್ನಪೂರ್ಣಳ ಗಂಡನ ಹೆಸರು ಚನ್ನಬಸಪ್ಪ ಅಂದರೆ ಸರಿ. ದಿಃ 05.04.2011 ರಂದು ಮೃತ್ಯು ಪತ್ರವಾಗಿದೆ. ಮೃತ್ಯು ಪತ್ರವಾದಾಗ ಅನ್ನಪೂರ್ಣ ಳ ಗಂಡ ಜೀವಂತ ಇದ್ದ ಅಂದರೆ ಸರಿ. ಅನ್ನಪೂರ್ಣ ಗಂಡ ಜೀವಂತ ಇರುವುದರಿಂದ ಮೃತ್ಯು ಪತ್ರ ಮಾಡುವ ಕಾರಣ ಇರಲಿಲ್ಲ ಅಂದರೆ ಸರಿಯಲ್ಲ. ಮೃತ್ಯು ಪತ್ರ ಮಾಡುವಾಗ ನಾನು ಇರಲಿಲ್ಲ. ಮೃತ್ಯು ಪತ್ರವನ್ನು ತಂದು ಕೊಟ್ಟ ನಂತರ ಅದರ ಮೇಲೆ ಯಾರು ಸಹಿ ಮಾಡಿದ್ದಾರೆಂದು ಗೊತ್ತಾಯಿತು. ಮೃತ್ಯು ಪತ್ರ ಓದಿ ನೋಡಿರುತ್ತೇನೆ. ಮೃತ್ಯು ಪತ್ರದಲ್ಲಿ ಗಂಡ ಜೀವಂತ ಇದ್ದ ಬಗ್ಗೆ ಬರೆದಿಲ್ಲ ಅಂದರೆ ಸರಿ. ಮೃತ್ಯು ಪತ್ರದಲ್ಲಿ ಎಲ್ಲಾ ಪುಟಕ್ಕೂ ಸಹಿ ಮಾಡಿಲ್ಲವೆಂದರೆ ಸರಿ. ಕೊನೆಯ ಪುಟದಲ್ಲಿ ಸಹಿ ಮಾಡಿರುತ್ತಾರೆ ಅಂದರೆ ಸರಿ. ರೂ. 2/- ರೂ. ಛಾಪಾ ಕಾಗದಗಳು ಎಲ್ಲಾ ಕಡೆಗೂ ಸಿಗುತ್ತವೆ ಅಂದರೆ ಸರಿ. ಮೃತ್ಯು ಪತ್ರದಲ್ಲಿ ಪುಟ ನಂಃ 1 ಹಾಗೂ 2 ರಲ್ಲಿ ಸಹಿ ಇಲ್ಲದ ಕಾರಣ ಯಾರು ಮಾಡಿದ್ದಾರೆಂದು ಹೇಳಲು ಆಗುವುದಿಲ್ಲವೆಂದರೆ ಕೊನೆಯ ಪುಟದಲ್ಲಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಅನ್ನಪೂರ್ಣ ರವರು ದಿಃ 07.08.2011 ರಂದು ಮರಣ ಹೊಂದಿರುತ್ತಾರೆ. ಸಾಯುವದಕ್ಕಿಂತ ಪೂರ್ವದಲ್ಲಿ ವರ್ಷಗಟ್ಟಲೇ ಆರಾಮ ಇರಲಿಲ್ಲ ಅಂದರೆ ಸರಿಯಲ್ಲ. ಅನ್ನಪೂರ್ಣ ವಯಸ್ಸಾಗಿ ಮರಣ ಹೊಂದಿದಳು ಅಂದರೆ ಸರಿಯಲ್ಲ. ಅನ್ನಪೂರ್ಣ ಮರಣ ಹೊಾಂದುವ ಕಾಲದಲ್ಲಿ ಅವರಿಗೆ 70 ವರ್ಷ ವಯಸ್ಸಾಗಿತ್ತು ಅಂದರೆ, 60 – 65 ವರ್ಷ ಆಗಿತ್ತು ಎಂದು ಹೇಳುತ್ತಾರೆ. ಅನ್ನಪೂರ್ಣ ಸಾಯುವ ಕಾಲಕ್ಕೆ ಅವರ ಗಂಡ ಆರೋಗ್ಯವಾಗಿದ್ದನು ಅಂದರೆ ಸರಿ. ಅನ್ನಪೂರ್ಣ ಗಂಡನಿಗೆ ಯಾವುದೇ ಆಸ್ತಿ ಇರಲಿಲ್ಲ ಅಂದರೆ ಸರಿಯಲ್ಲ. ಅನ್ನಪೂರ್ಣ ಗಂಡನಿಗೆ ಇಷ್ಟೆ ಆಸ್ತಿ ಇದ್ದವು ಎಂದು ಗೊತ್ತಿಲ್ಲ. ಅವುಗಳ ಸರ್ವೆ ನಂಬರ ಗೊತ್ತಿಲ್ಲ.

**FDP 16-12** **PW : 1**

ಅನ್ನಪೂರ್ಣ ರವರಿಗೆ ತನ್ನ ಹಿಸ್ಸಾದ ಆಸ್ತಿ ಗಂಡನಿಗೆ ಹೋಗಬೇಕೆಂದು ಆಸೆ ಇತ್ತು ಅಂದರೆ ಸರಿಯಲ್ಲ. ಈಗ ಸಾಕ್ಷಿಗೆ ಒಂದು ನೋಟರಿ ದೃಢೀಕೃತ ಮೃತ್ಯು ಪತ್ರವನ್ನು ತೋರಿಸಲಾಗಿ ಅದರಲ್ಲಿರುವ ಅನ್ನಪೂರ್ಣ ರವರ ಸಹಿ ಅಲ್ಲವೆಂದು ಹೇಳುತ್ತಾರೆ. ಅನ್ನಪೂರ್ಣ ರವರು ಚಂದ್ರಶೇಖರಪ್ಪನಿಗೆ ತನ್ನ ಹಿಸ್ಸಾದ ಆಸ್ತಿಯನ್ನು ಮೃತ್ಯು ಪತ್ರ ಬರೆದುಕೊಟ್ಟಿರುತ್ತಾರೆ ಅಂದರೆ ಸರಿಯಲ್ಲ. 1981 ರಲ್ಲಿ ಡಿಕ್ರಿಯಾಗಿದೆ. ಡಿಕ್ರಿಯಾದ ನಂತರ ಕುಟುಂಬದಲ್ಲಿ ಹಲವಾರು ಬಾರಿ ವಾಟ್ನಿ ಮಾಡಿಕೊಂಡಿರುತ್ತೇವೆ ಅಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲಿಗೆ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.